# ಐಪಿಎಲ್‌ನಲ್ಲಿ ‘ಫಿಕ್ಸಿಂಗ್’ ಭೂತ!

ಟ್ವೆಂಟಿ–20 ಕ್ರಿಕೆಟ್‌ನಲ್ಲಿ ಮನರಂಜನೆಯ, ವ್ಯಾಪಾರೀಕರಣದ ವಿರಾಟ್‌ರೂಪ ಎದ್ದು ಕಾಣಿಸುತ್ತದೆ. ಕಾಳಸಂತೆಯಲ್ಲಿ ಒಂದಕ್ಕೆರಡು ಹಣಕೊಟ್ಟು ಟಿಕೆಟ್ ಖರೀದಿಸುವ ಯುವಜನ, ಸಿಕ್ಸರ್, ಬೌಂಡರಿ ಅಥವಾ ವಿಕೆಟ್ ಬಿದ್ದಾಕ್ಷಣ ಕ್ರೀಡಾಂಗಣದಲ್ಲಿ ಕುಣಿಯುವ ಚಿಯರ್‌ಗರ್ಲ್ಸ್, ಪೆವಿಲಿಯನ್‌ನಲ್ಲೇ ನಡೆಯುವ ಪಾನಗೋಷ್ಠಿ, ತಾರಾ ಹೋಟೆಲ್‌ಗಳಲ್ಲಿ ನಡೆಯುವ ಮಧ್ಯರಾತ್ರಿಯ ಪಾರ್ಟಿಗಳು, ಇನ್ನೊಂದೆಡೆ ಕೋಟ್ಯಂತರ ರೂಪಾಯಿ ಕೈ ಬದಲಾಗುವ ಬೆಟ್ಟಿಂಗ್ ದಂಧೆ– ಎಲ್ಲವೂ ಈಗ ಕ್ರಿಕೆಟ್‌ನ ಅವಿಭಾಜ್ಯ ಅಂಗಗಳೇ ಆಗಿವೆ.

ಇಂಡಿಯನ್ ಪ್ರೀಮಿಯರ್ ಲೀಗ್ (ಐಪಿಎಲ್) ಕ್ರಿಕೆಟ್ ಎಂಬ ಕ್ರೀಡೆಯ ಸ್ವರೂಪವನ್ನೇ ಬದಲಿಸಿದೆ. ಐದು ದಿನಗಳ ಕಾಲ ತಾಳ್ಮೆಯಿಂದ, ನಿಯಮಬದ್ಧವಾಗಿ ಸೊಗಸಾದ ಟೆಸ್ಟ್ ಕ್ರಿಕೆಟ್ ಆಡುತ್ತಿದ್ದ ದಿನಗಳು ಈಗ ಮರೆತೇ ಹೋದಂತಿವೆ. ಐದು ದಿನಗಳ, ಉಭಯ ತಂಡಕ್ಕೂ ಎರಡು ಇನಿಂಗ್ಸ್‌ಗಳ ಆಟವಿರುತ್ತಿದ್ದ ಟೆಸ್ಟ್ ಕ್ರಿಕೆಟ್ ನೋಡಲು ಈಗ ಕ್ರೀಡಾಂಗಣಕ್ಕೆ ಬರುವ ವೀಕ್ಷಕರೂ ಕಡಿಮೆ. ಟೆಸ್ಟ್ ಪಂದ್ಯಗಳು ಸ್ವಾರಸ್ಯ ಕಳೆದುಕೊಳ್ಳಲು, 50 ಓವರ್‌ಗಳ ‘ಏಕದಿನದ ಪಂದ್ಯ’ಗಳು ಜನಪ್ರಿಯವಾದದ್ದೂ ಒಂದು ಕಾರಣ. ‘ಟ್ವೆಂಟಿ–20’ ಎಂಬ ಇಪ್ಪತ್ತು ಓವರ್‌ಗಳ ಚುಟುಕು ಕ್ರಿಕೆಟ್ ಬಂದ ಬಳಿಕ, 50 ಓವರ್‌ಗಳ ಪಂದ್ಯಗಳೂ ಸ್ವಾರಸ್ಯ ಕಳೆದುಕೊಳ್ಳುತ್ತಿವೆ. ಐದು ದಿನಗಳಿಂದ, ಒಂದು ದಿನಕ್ಕೆ ಇಳಿದ ಕ್ರಿಕೆಟ್ ಪಂದ್ಯಗಳು, ಈಗ ಕೇವಲ ನಾಲ್ಕು ಗಂಟೆಗಳಲ್ಲಿ ಮುಕ್ತಾಯ ಕಾಣುವುದು ಬದಲಾಗುತ್ತಿರುವ ಕಾಲಮಾನದ ಸಂಕೇತವೂ ಹೌದು. ಇದು ‘ಇನ್‌ಸ್ಟಂಟ್’ ಯುಗ, ಎಲ್ಲವೂ ಫಟಾಫಟ್ ಆಗಬೇಕು. ಆಟ, ಸ್ಪರ್ಧೆ, ಫಲಿತಾಂಶ ಎಲ್ಲವೂ ಎಷ್ಟು ಬೇಗ ಸಾಧ್ಯವೋ ಅಷ್ಟು ಬೇಗ ಮುಗಿಯಬೇಕು. ಜನರಿಗೆ ಕಾಯುವ ತಾಳ್ಮೆ ಇಲ್ಲ.

ಕ್ರಿಕೆಟ್ ಆಟಗಾರರಿಗೂ ಅಷ್ಟೆ– ಕಾಯುವ ತಾಳ್ಮೆ ಇಲ್ಲ. ಅರ್ಜೆಂಟಾಗಿ ಕೋಟಿಗಟ್ಟಳೆ ಹಣ ಗಳಿಸಬೇಕು! ನಾಲ್ಕೈದು ವರ್ಷಗಳ ಕಾಲ ರಣಜಿ, ದುಲೀಪ್ ಮುಂತಾದ ದೇಶೀ ಕ್ರಿಕೆಟ್‌ನಲ್ಲಿ, ಬಳಿಕ ಇಂಗ್ಲೆಂಡಿನ ಕೌಂಟಿ ತಂಡಗಳಲ್ಲಿ ಆಡಿ, ಎಲ್ಲ ಹವಾಮಾನದಲ್ಲೂ, ಎಲ್ಲ ರೀತಿಯ ಪಿಚ್‌ಗಳಲ್ಲೂ ಅನುಭವ ಗಳಿಸಿ, ಕೊನೆಗೆ ರಾಷ್ಟ್ರದ ತಂಡಕ್ಕೆ ಆಯ್ಕೆ ಆಗುತ್ತಿದ್ದ ವಿಧಾನವೂ ಈಗಿಲ್ಲ. ಐಪಿಎಲ್‌ನಲ್ಲಿ ಕ್ರಿಕೆಟಿಗರ ‘ಬಾಹುಬಲ’ವೇ ಬಹುಮುಖ್ಯ ಅಂಶ. ಅವರ ಬೌಂಡರಿ, ಸಿಕ್ಸರುಗಳೇ ಜೀವಾಳ. ತರಬೇತಿ, ಶಿಸ್ತು, ಶ್ರದ್ಧೆ, ಪ್ರಾಮಾಣಿಕತೆ ಎಲ್ಲವೂ ಹಿಂದಿನ ಸಾಲಿನಲ್ಲಿ. ಅತ್ಯಂತ ಕಡಿಮೆ ಸಂಖ್ಯೆಯ ಎಸೆತಗಳಲ್ಲಿ ಆಟಗಾರನೊಬ್ಬ ಎಷ್ಟು ಹೆಚ್ಚು ರನ್ ಗಳಿಸುತ್ತಾನೆ, ಎಷ್ಟು ವೇಗವಾಗಿ ರನ್ ಗಳಿಸುತ್ತಾನೆ ಎನ್ನುವುದರ ಮೇಲೆ ಆತನ ಕ್ರಿಕೆಟ್ ಮಾರುಕಟ್ಟೆ ದರವೂ ನಿರ್ಧಾರವಾಗುತ್ತದೆ. ಆಟಗಾರನಿಗೆ ರನ್ ಗಳಿಸಲೇ ಆಗದಂತೆ ಹೆಚ್ಚು ಬುದ್ಧಿವಂತಿಕೆಯಿಂದ ಬೌಲಿಂಗ್ ಮಾಡುವಾತನೇ ಇಲ್ಲಿ ಯಶಸ್ವೀ ಬೌಲರ್. ಸಿಕ್ಸರ್‌ಗಳು ಹೆಚ್ಚಿದಷ್ಟೂ ಆಟಗಾರ ಗಳಿಸುವ ಹಣದ ಮೊತ್ತ ಹೆಚ್ಚುತ್ತದೆ. ಹಾಗೆಯೇ ಮೈದಾನದಾಚೆ ಕಂಪೆನಿಗಳು ಆತನಿಗೆ ನೀಡುವ ಜಾಹೀರಾತು ಮೊತ್ತವೂ ಏರುತ್ತದೆ. ಚುಟುಕು ಕ್ರಿಕೆಟ್ ಎಂದರೆ ‘ದಿಢೀರ್ ತಾರೆ’ಯರ ಸ್ವರ್ಗ. ಈ ದಿಢೀರ್ ತಾರೆಯರ ಸುತ್ತ ಹಣದ ಹೊಳೆಯೇ ಹರಿಯುತ್ತಿದೆ. ಹಣದ ಹರಿವು ಹೆಚ್ಚಾದಂತೆ ಮೌಲ್ಯಗಳು ದೂರ ಸರಿಯತೊಡಗುತ್ತವೆ.

ಕ್ರಿಕೆಟ್‌ಗೆ ಇವತ್ತು ಆಗಿರುವುದೂ ಅದೇ. ಟ್ವೆಂಟಿ–20 ನಡೆಯುವ ಕ್ರೀಡಾಂಗಣಕ್ಕೆ ಒಮ್ಮೆ ಭೇಟಿ ಕೊಟ್ಟರೆ ಮನರಂಜನೆಯ, ವ್ಯಾಪಾರೀಕರಣದ ವಿರಾಟ್‌ರೂಪ ಎದ್ದು ಕಾಣಿಸುತ್ತದೆ. ಕಾಳಸಂತೆಯಲ್ಲಿ ಒಂದಕ್ಕೆರಡು ಹಣಕೊಟ್ಟು ಟಿಕೆಟ್ ಖರೀದಿಸುವ ಯುವಜನ, ಸಿಕ್ಸರ್, ಬೌಂಡರಿ ಅಥವಾ ವಿಕೆಟ್ ಬಿದ್ದಾಕ್ಷಣ ಕ್ರೀಡಾಂಗಣದಲ್ಲಿ ಕುಣಿಯುವ ಚಿಯರ್‌ಗರ್ಲ್ಸ್, ಪೆವಿಲಿಯನ್‌ನಲ್ಲೇ ನಡೆಯುವ ಪಾನಗೋಷ್ಠಿ, ತಾರಾ ಹೋಟೆಲ್‌ಗಳಲ್ಲಿ ನಡೆಯುವ ಮಧ್ಯರಾತ್ರಿಯ ಪಾರ್ಟಿಗಳು, ಇನ್ನೊಂದೆಡೆ ಕೋಟ್ಯಂತರ ರೂಪಾಯಿ ಕೈ ಬದಲಾಗುವ ಬೆಟ್ಟಿಂಗ್ ದಂಧೆ– ಎಲ್ಲವೂ ಈಗ ‘ಟ್ವೆಂಟಿ–20’ ಕ್ರಿಕೆಟ್‌ನ ಅವಿಭಾಜ್ಯ ಅಂಗಗಳೇ ಆಗಿವೆ. ಬೆಟ್ಟಿಂಗ್‌ನಲ್ಲಿ ತುರ್ತಾಗಿ ಹಣ ಮಾಡಬಯಸುವ ಜನ ಆಟಗಾರರನ್ನೇ ‘ಬುಕ್’ ಮಾಡಿಕೊಂಡು ‘ಸ್ಪಾಟ್ ಫಿಕ್ಸಿಂಗ್’ ಶುರು ಮಾಡಿದ್ದಾರೆ. ಅವರ ಬೆನ್ನಿಗೆ ಭೂಗತ ಕ್ರಿಮಿನಲ್‌ಗಳು ನಿಂತಿದ್ದಾರೆ. ‘ಆಟ ಹೇಗಾದರೂ ನಡೆಯಲಿ, ಲಕ್ಷಗಟ್ಟಳೆ ಹಣ ದೋಚಬೇಕು’ ಎನ್ನುವುದೇ ಮುಖ್ಯವಾದಾಗ ಕ್ರೀಡಾಸ್ಫೂರ್ತಿ ಮಕಾಡೆ ಮಲಗುತ್ತದೆ.

ಜೂಜು ಮನುಷ್ಯನ ಬಹುದೊಡ್ಡ ದೌರ್ಬಲ್ಯಗಳಲ್ಲಿ ಒಂದು. ಕ್ರೀಡಾಂಗಣದ ಹೊರಗೆ, ಯಾರೋ ವ್ಯಾಪಾರಿಗಳು ಕ್ರಿಕೆಟ್ ಮೇಲೆ ಜೂಜಾಟ ನಡೆಸುವುದು ಬೇರೆ. ಆದರೆ ಐಪಿಎಲ್ ಟೂರ್ನಿಯನ್ನು ನಡೆಸುತ್ತಿರುವ ಬಿಸಿಸಿಐ ನ ಪದಾಧಿಕಾರಿಗಳು ಅಥವಾ ಅವರ ನಿಕಟವರ್ತಿಗಳೇ ಈ ಅಕ್ರಮ ಜೂಜಿನಲ್ಲಿ ಪಾಲುದಾರರಾಗುವುದು ಅಕ್ಷಮ್ಯ. ಕ್ರೀಡಾಸ್ಫೂರ್ತಿಯನ್ನು ನೆಚ್ಚಿಕೊಂಡು, ಆಟಗಾರರ ಕ್ರೀಡಾಕೌಶಲ್ಯದ ಬಗ್ಗೆ ನಿರೀಕ್ಷೆಗಳನ್ನು ಇಟ್ಟುಕೊಂಡು ಮೈದಾನಕ್ಕೆ ಬರುವ, ಟಿ.ವಿ ಮುಂದೆ ಕೂರುವ ಕೋಟ್ಯಂತರ ಜನ, ಈಗ ಸ್ಪಾಟ್ ಫಿಕ್ಸಿಂಗ್‌ನಿಂದಾಗಿ ಕ್ರೀಡೆಯ ಮೇಲೆಯೇ ನಂಬಿಕೆ ಕಳೆದುಕೊಳ್ಳುತ್ತಿದ್ದಾರೆ. ರಾಜಕಾರಣಿಗಳ ಆಡೊಂಬಲವಾಗಿರುವ, ಹಣದ ಸುಪ್ಪತ್ತಿಗೆಯಲ್ಲಿ ತೇಲುತ್ತಿರುವ ಭಾರತೀಯ ಕ್ರಿಕೆಟ್ ನಿಯಂತ್ರಣ ಮಂಡಳಿಯನ್ನು ಈ ಭ್ರಷ್ಟತೆಯ ಜಾಲದಿಂದ ನಿಯಂತ್ರಣಮುಕ್ತಗೊಳಿಸಲು ಕಠಿಣ ಕ್ರಮಗಳನ್ನು ಕೈಗೊಳ್ಳಬೇಕಿದೆ.

■ ಬಿ.ಎಂ.ಹನೀಫ್



ಈಶ್ವರ್